ಹೊರಟು ಹೋಯಿತು. ಅದರಂತೆ ನರಿಯಮ್ಮ ಹೇಳಿದ ಸಮಯಕ್ಕೆ ಸರಿಯಾಗಿ ಕೊಕ್ಕರೆ ಪಾಠಕ್ಕೆ ಹೋಯಿತು.

ಮೊದಲ ಪಾಠ ನದಿ ತೀರದಲ್ಲಿ ಎಂದ ನರಿಯಮ್ಮ ಕೊಕ್ಕರೆಯೊಂದಿಗೆ ನದಿ ತೀರಕ್ಕೆ ಹೋಯಿತು. ಮೊದಲಿಗೆ ಪಾದ ಮುಳುಗುವಷ್ಟು ನೀರಿನಲ್ಲಿ ನಿಂತು ಉಪವಾಸ ವ್ರತ ಮಾಡಲು ಸೂಚಿಸಿತು. ಹಸಿವೆಗೆ ನೀರನ್ನು ಮಾತ್ರಾ ಕುಡಿ. ರಾತ್ರಿ ಸಮಯ ದಡದಲ್ಲಿ ನಿದ್ರಿಸಲು ಅವಕಾಶವಿದೆ. ನಾನು ಸಾಯಂಕಾಲ ಬರುತ್ತೇನೆ ಎಂದು ನರಿಯಮ್ಮ ಹೊರಟು ಹೋದಳು.

ನರಿಯಮ್ಮನ ಸೂಚನೆಯಂತೆ ಕೊಕ್ಕರೆ ಪಾದ ಮುಳುಗುವಷ್ಟು ನೀರಿನಲ್ಲಿ ನಿಂತುಕೊಂಡಿತು. ಮಧ್ಯಾಹ್ನದವರೆಗೆ ಹಾಗೇ ನಿಂತಿದ್ದ ಕೊಕ್ಕರೆಗೆ ಹಸಿವು ತಡೆಯಲಾಗಲಿಲ್ಲ. ಕಾಲುಗಳಿಗೆ ಸೋಂಕುತ್ತಿದ್ದ ಮೀನುಗಳನ್ನು ತಿನ್ನಲೇ ಬೇಕೆನಿಸಿತು. ಕಣ್ಣು ಬಿಟ್ಟು ಸುತ್ತ ನೋಡಿತು. ಯಾರೂ ಇರಲಿಲ್ಲ. ಕೂಡಲೇ ತನ್ನ ಉದ್ದ ಕೊಕ್ಕಿನಿಂದ ಮೀನುಗಳನ್ನು ಹೆಕ್ಕಿ ತಿನ್ನಲಾರಂಭಿಸಿತು. ಹೊಟ್ಟೆ ತುಂಬಾ ಮೀನು ತಿಂದು, ನೀರು ಕುಡಿದು ಮತ್ತೆ ಹಾಗೇ ನಿಂತುಕೊಡಿತು.

ಸಾಯಂಕಾಲ ಆರು ಗಂಟೆಗೆ ಸರಿಯಾಗಿ ನರಿಯಮ್ಮ ಆಗಮಿಸಿದಳು. 'ನಾನು ಹೇಳಿದಂತೆ ಈವರೆಗೆ ಉಪವಾಸವಿದ್ದು, ನೀರಿನಲ್ಲಿ ನಿಂತು ಕೊಂಡಿದ್ದಿಯಾ?' ನರಿಯಮ್ಮ ಪ್ರಶ್ನಿಸಿದಳು.

ಹೌದು. ಗುರುಗಳ ಆಜ್ಞೆಯನ್ನು ತಪ್ಪದೆ ಪಾಲಿಸಿದ್ದೇನೆ. ಮಧ್ಯಾಹ್ನ ಮಾತ್ರ ಹೊಟ್ಟೆ ತುಂಬಾ ನೀರು ಕುಡಿದೆ ಎಂದು ಕೊಕ್ಕರೆ ಸುಳ್ಳು ಹೇಳಿತು.

ಸರಿ ಹಾಗಾದರೆ ಈ ರಾತ್ರಿ ನೇರಳೆ ಮರದ ಆಶ್ರಯದಲ್ಲಿ ನಿದ್ರಿಸು. ಬೆಳಿಗ್ಗೆ ಬೇಗ ಬರುತ್ತೇನೆ ಎಂದು ನರಿಯಮ್ಮ ಹೊರಟು ಹೋದಳು.

ಕೊಕ್ಕರೆ ಮತ್ತಷ್ಟು ಹೊಟ್ಟೆ ತುಂಬಿಸಿಕೊಡು ನಿದ್ರಿಸಿತು. ಬೆಳಗಾಗುತ್ತಲೇ ಬೇಗ ಬೇಗ ಬೇಟೆ ಮುಗಿಸಿದ ಕೊಕ್ಕರೆ, ನರಿಯಮ್ಮ ಬಂದೊಡನೆ ನಮಸ್ಕರಿಸಿತು.

ಸರಿ. ನಿನ್ನೆಯ ಪಾಠವನ್ನೇ ಮುಂದುವರೆಸು ಎಂದ ನರಿಯಮ್ಮ ಹೊರಟೇ ಹೋದಳು.

ಕೊಕ್ಕರೆ ನೀರಿನಲ್ಲೇನೋ ನಿಂತಿತು. ಆದರೆ ಉಪವಾಸವಿರಲು ಆಗಲಿಲ್ಲ. ಮೀನುಗಳನ್ನು ತಿಂದು ತೇಗಿತು. ರಾತ್ರಿ ನೇರಳೆ ಮರದ ಆಶ್ರಯದಲ್ಲಿ ನಿದ್ರೆ ಮಾಡಿತು.

ಬೆಳಿಗ್ಗೆ ಎದ್ದು ಹೊಟ್ಟೆ ತುಂಬಿಸಿಕೊಡು ನೀರಿನಲ್ಲಿ ನಿಂತಿತು.

ನರಿಯಮ್ಮ ಬಂದಳು ಕೊಕ್ಕರೆ ನಮಸ್ಕರಿಸಿತು. 'ಉಪವಾಸ ವ್ರತ ಮಾಡಿದ್ದೇನೆ. ಈ ದಿವಸದಿಂದಲಾದರೂ ಪಾಠ ಆರಂಭವಾಗಲಿ. ಸಮಯ ವ್ಯರ್ಥವಾಗಿಸೋದು ಬೇಡ' ಕೊಕ್ಕರೆ ಕೇಳಿಕೊಂಡಿತು.

ಕೊಕ್ಕರೆ ಕೇಳಿಲ್ಲಿ. ಮೊದಲ ಪಾಠದಲ್ಲಿ ಸುಳ್ಳು ಹೇಳಬಾರದು ಎಂಬ ನೀತಿಯ ಕಲಿತುಕೊ. ವಿದ್ಯೆ ಕಲಿಯಲು ಆಸಕ್ತಿ, ಶ್ರದ್ಧೆ ಮತ್ತು ಏಕಾಗ್ರತೆಗಳಿರಬೇಕು. ನಿನ್ನದು ಚಂಚಲ ಮನಸ್ಸು. ಹಾಗಾಗಿ ನಿನ್ನಲ್ಲಿನ ಏಕಾಗ್ರತೆಯನ್ನು ಪರೀಕ್ಷಿಸುವ ಸಲುವಾಗಿ, ಪಾದ ಮುಳುಗುವಷ್ಟು ನೀರಿನಲ್ಲಿ ನಿಂತು, ಉಪವಾಸ ಮಾಡಬೇಕೆಂದು ಸೂಚಿಸಿದೆ. ಆದರೆ ನೀನು ವನಸುಂದರಿಯಾಗಬೇಕೆನ್ನುವ ಹಂಬಲದಲ್ಲಿ ಹೊಟ್ಟೆ ತುಂಬಾ ಮೀನುಗಳನ್ನು ತಿಂದೂ, ಉಪವಾಸವಿದ್ದೆ ಎಂದು ಸುಳ್ಳು ಹೇಳಿದೆ. ನಿನ್ನ ಬಾಯಿಂದ ಬರುತ್ತಿರುವ ಮೀನಿನ ವಾಸನೆಯನ್ನು ಗ್ರಹಿಸಲಾರದಷ್ಟು ದಡ್ಡಳಲ್ಲ ನಾನು. ನಿನ್ನಲ್ಲಿ ವಿದ್ಯೆ ಕಲಿಯಲು ಆಸಕ್ತಿ, ಶ್ರದ್ಧೆ, ಏಕಾಗ್ರತೆಗಳಿಲ್ಲವೆಂದು ಇದೀಗ ಸಾಬೀತಾಗಿದೆ. ನಾನು ಪಾಠ ಹೇಳಿಕೊಡುವುದಿಲ್ಲ' ಎಂದ ನರಿಯಮ್ಮ ಕೊಕ್ಕರೆಯ ಉತ್ತರಕ್ಕೂ ಕಾಯದೆ ಹೊರಟು ಹೋದಳು. ■



ಗಣೇಶ್ ಅರಳಿಕಟ್ಟಿ

# ಪೊರಕೆಯ ಆಸೆ

■ ಎಂ.ಎಂ. ಸಂಗಣ್ಣವರ

ಉಡುಗುವಂಥ ಪೊರಕೆಯೊಂದು
ನವಿಲ ಕುಣಿತ ನೋಡಿತು
ಬೇಗ ಅದರ ರೀತಿಯಲ್ಲಿ
ಕುಣಿಯಲೆತ್ನ ಮಾಡಿತು

ನವಿಲು ತನ್ನ ಕುಣಿತದಿಂದ
ಹೆಸರುವಾಸಿಯಾಗಿದೆ
ರಾಷ್ಟ್ರಪಕ್ಷಿಯೆನಿಸಿಕೊಂಡು
ಹೆಮ್ಮೆಯಿಂದ ಬೀಗಿದೆ

ಅಂಥ ಖ್ಯಾತಿ ಹೊಂದಲೆಂದು
ಪೊರಕೆ ಆಸೆ ಪಟ್ಟಿತು
ನವಿಲಿನಂತೆ ಕುಣಿಯುವಲ್ಲಿ
ಹೆಚ್ಚು ಗಮನ ಕೊಟ್ಟಿತು

ಮನೆಯ ತುಂಬ ಕುಣಿದ ಪೊರಕೆ
ಒಲೆಯ ಸನಿಹ ಬಂದಿತು
ಕ್ರಮವೆ ಇರದ ಕುಣಿತದಿಂದ
ತಾನೆ ಒಲೆಗೆ ಬಿದ್ದಿತು

ಪೊರಕೆ ಬೇಗ ದಹಿಸಲೆಂದು
ಅದರ ಬಿಸಿಯು ತಟ್ಟಿತು
ಬೆಂಕಿಯಲ್ಲಿ ಬಿದ್ದುಕೊಂಡು
ಬೂದಿಯಾಗಿ ಬಿಟ್ಟಿತು

ಸಾಧ್ಯವಿರದ ಆಸೆಗಾಗಿ
ಪೊರಕೆ ಯತ್ನ ಮಾಡಿತು
ಯತ್ನವೆಲ್ಲ ವ್ಯರ್ಥವಾಗಿ
ಬೇಗ ನಾಶ ಹೊಂದಿತು ■